ಕುಕ್ಕರಳ್ಳಿ ಕೆರೆ ಏರಿಯ ಮೇಲೆ ನಿಧಾನವಾಗಿ ನಡೆಯುತ್ತ ಸಾಗಿದ್ದೆವು – ನಾನು, ನನ್ನ ಗೆಳತಿ ಮಧುರಾ. ಆಗಾಗ ಕೆಳಗೆಬಗ್ಗಿ ಒಂದೊಂದೇ ಸಣ್ಣ ಕಲ್ಲುಗಳನ್ನು ಆರಿಸಿಕೊಂಡು ಎತ್ತರಿಸಿ ಒಗೆದು ಅಲೆಯ ಉಂಗುರಗಳನ್ನು ನೋಡಿ ಖುಷಿಯಾಗಲು ಪ್ರಯತ್ನಿಸುತ್ತಿದ್ದೆ. ಛೇ! ಈ ಕುಕ್ಕರಳ್ಳಿ ಕೆರೆ ಬಗ್ಗೆ ಹಿರಿಯ ತಲೆಮಾರಿನ ಸಾಹಿತಿಗಳು ಬಲು ರೊಮ್ಯಾಂಟಿಕ್ಕಾಗಿ ಬರೆದು ಬರೆದು ನನ್ನ ತಲೆ ಕೆಡಿಸಿ, ಅದನ್ನು ನೋಡಲೇಬೇಕೆಂಬ ಬಯಕೆ ಹೊತ್ತು ಇಲ್ಲಿಗೆ ಬಂದರೆ ನನಗೇಕೋ ಅಂಥ ವಿಶೇಷ ಸೌಂದರ್ಯ ಕಾಣಲಿಲ್ಲ. ಸೌಂದರ್ಯ ನೋಡುವ ಕಣ್ಣುಗಳಲ್ಲೋ, ನೋಡುತ್ತಿರುವ ವಸ್ತುವಿನಲ್ಲೋ, ಇಲ್ಲಾ ನೋಡುವವರ ವಯಸ್ಸಿನಲ್ಲೋ ಅಂತ ಪ್ರಶ್ನೆಗಳು ಹರಳುಕಲ್ಲುಗಳಾಗಿ ಮನಕ್ಕೆ ಬಿದ್ದು ತರಂಗಗಳನ್ನೆಬ್ಬಿಸುತ್ತಿದ್ದವು.

‘‘ಮೈಸೂರಿನಲ್ಲಿ ಒಂದು ಸೆಮಿನಾರ ಅದ ನೋಡ್ರಿ, ಯಾರರೇ ಹೋಗ್ತಿದ್ರ ಒಂದು ಪೇಪರ ರೆಡಿ ಮಾಡ್ರಿ’’ ಅಂತ ನಮ್ಮ ಎಚ್‌ಓಡಿ ಪಾಟೀಲರು ಹೇಳಿದ್ದೇ ತಡ ನನ್ನ ಉತ್ಸಾಹ ಗರಿಗೆದರಿತ್ತು. ಬ್ರೋಶರ್ ತೆಗೆದು ನೋಡಿದರೆ ಗೆಳತಿಯದೇ ಕಾಲೇಜು, ಅವಳೇ ಸೆಮಿನಾರಿನ ಕೊಆರ್ಡಿನೇಟರ್ ಕೂಡ. ಎರಡು ದಿನಗಳ ಸೆಮಿನಾರು. ಮುಗಿಸಿ ಒಂದೆರೆಡು ದಿನ ಅವಳೊಡನೆ ಕಳೆಯುವ ಅಪರೂಪದ ಅವಕಾಶಕ್ಕಾಗಿ ಮನಸ್ಸು ಹಂಬಲಿಸತೊಡಗಿತು. ಮೈಸೂರನ್ನು ಈ ಮೊದಲು ನೋಡಿಲ್ಲವೆಂತಲ್ಲ. ಆದರೆ, ಸೆಮಿನಾರ್ ಅಂತ ಹೋಗುವುದೇ ಬೇರೆ. ಬಹಳಷ್ಟು ಜನಕ್ಕೆ ಈ ಸೆಮಿನಾರುಗಳೆಂದರೆ ಒಂದು ನೆಪ ಅಷ್ಟೇ. ಬೇರೆ ಬೇರೆ ಸ್ಥಳಗಳನ್ನು ನೋಡಿಬರಲು ಇಷ್ಟು ಒಳ್ಳೆಯ ಅವಕಾಶ ಮತ್ತೆ ಸಿಗುವುದಿಲ್ಲ. ಗೋಷ್ಠಿಗಳನ್ನು ಏರ್ಪಡಿಸಿದ ಕಾಲೇಜಿನವರು ಎರಡು ದಿನ ರುಚಿ ರುಚಿಯಾದ ಊಟ ತಿಂಡಿ ಒದಗಿಸುತ್ತಾರೆ. ಅವರಿಗೆ ಯುಜಿಸಿ ಫಂಡ್ ಒದಗಿಸುತ್ತದೆ. ಕೆಲವು ಕಾಲೇಜಿನವರು ತಮ್ಮ ಅಧ್ಯಾಪಕರಿಗೆ ಟಿ.ಎ., ಡಿ.ಎ. ಕೊಟ್ಟು ಹಾಜರಾಗಲು ಅನುಕೂಲ ಮಾಡಿಕೊಡುತ್ತಾರೆ. ಹೀಗಾಗಿ ಈಗೀಗ ಈ ಸೆಮಿನಾರುಗಳು, ವರ್ಕ್‌ಶಾಪುಗಳು ಜಾತ್ರೆಗಳಂತಾಗಿವೆ. ಆದರೆ ಒಮ್ಮೊಮ್ಮೆ ಹೋಗಬೇಕೆಂಬ ಹಂಬಲ ಎಂಥವರನ್ನೂ ಕಾಡದೇ ಇರದು.

ಮೊಬೈಲ್ ರಿಂಗಣ ಮನಸ್ಸನ್ನು ವಾಸ್ತವಕ್ಕೆ ಕರೆದುತಂದಿತು. ‘‘ಎಲ್ಲಿದ್ದಿ? ಸೆಮಿನಾರ್ ಮುಗಿತೋ ಇಲ್ಲೋ? ರಿಟರ್ನ್ ಟಿಕೆಟ್ ಆತು? ಬೇಗ ಮಾಡಿಸು.’’ ಎಲ್ಲಾ ವ್ಯಾವಹಾರಿಕ ಎಂದೆನಿಸುವ ಗಂಡನ ಮಾತುಗಳು. ಹೆಂಡತಿ ಬೇಗ ಬರಲಿ ಎನ್ನುವ ಒಳಗುದಿ ಮಾತ್ರ ಮೊಬೈಲಿನ ತರಂಗದಂತೆ ನನ್ನೆದೆಗೆ ಮುಟ್ಟುತ್ತದೆ. ‘‘ಹಾಂ, ಇವತ್ತು ಮಾಡಸ್ತೇನಿ. ನಾಳೆ ರಾತ್ರಿ ಇಲ್ಲಿಂದ ಹೊರಡ್ತೇನಿ. ಹುಡುಗರು ಕಾಲೇಜಿಂದ ಬಂದ್ರು? ರಾತ್ರಿ ಊಟಾ ಎಲ್ಲಿ ಮಾಡ್ತೀರಿ? ರಾತ್ರಿ ಲಗೂ ಮಲಗಿ ಲಗೂ ಏಳ್ರಿ, ಟೀವಿ ನೋಡ್ತ ಕೂತುಬಿಡಬ್ಯಾಡ್ರಿ.’’ ಮತ್ತೆ ಎಲ್ಲಾ ತೀರಾ ಒಣಬಣ ಎನಿಸುವ ಒಳಗಿನ ತಳಮಳ ತೋರಿಸಲಾರದ ನನ್ನ ಪ್ರ್ಯಾಕ್ಟಿಕಲ್ ಮಾತುಗಳು. ಒಟ್ಟು ಎರಡು ನಿಮಿಷ. ಗಂಡ ಹೆಂಡತಿಯರ ಮಧ್ಯೆ ಇನ್ನೇನಿರುತ್ತೆ ಬಹಳ ಹೊತ್ತು ಮಾತನಾಡುವಂಥದು!